## ಹಿರಿಯೂರು ತಾಲ್ಲೂಕಿನಲ್ಲಿ ಅಬ್ಕಾರಿ ಭೂಮಿಯಂ ವಿಸ್ತೀರ್ಣ

೩೫೬ (೪೯೯) ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಹಿರಿಯೂರು ತಾಲ್ಲೂಕಿನಲ್ಲಿರುವ ಒಟ್ಟು ಅಬಕಾರಿ ಭೂಮಿಯ ವಿಸ್ತೀರ್ಣವೆಷ್ಟು? ಹಾಗೂ ಈ ಪ್ರದೇಶದಲ್ಲಿರುವ ಶೇಂದಿ ಮರಗಳ ಸಂಖ್ಯೆ ಎಷ್ಟು ?

ಆ) ಈ ಅಬಕಾರಿ ಭೂಮಿಯನ್ನು ಎಷ್ಟು ಜನ ರೈತರು ಸಾಗುವಳಿ ಮಾಡುತ್ತಿದ್ದಾರೆ ?

ಇ) ಈ ರೀತಿ ಮಾಡುತ್ತಿರುವ ಭೂಮಿಯಲ್ಲಿ ಶೇಂದಿ ಮರಗಳನ್ನು ನಾಶ ಪಡಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧. ಸುಮಾರು ೫,೮೧೮ ಎಕರೆ ೮೬ ಗುಂಟೆಗಳು.

೨. ಸುಮಾರು ೮,೦೦೦ ಶೇಂದಿ ಮರಗಳು.

ಆ) ಈ ಜಮೀನನ್ನು ಸುಮಾರು ೫೫೯ ಜನರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ.

ಇ) ಹೌದು. ಅತಿಕ್ರಮಣ ಮಾಡಿರುವವರು ಅಂತಹ ಭೂಮಿಯನ್ನು ತಮ್ಮ ಹೆಸರಿಗೆ ಸಕ್ರಮ ಗೊಳಿಸುವುದಕ್ಕೋಸ್ಕರ ತಮ್ಮ ಪಕ್ಕನ್ನು ಪ್ರತಿಪಾದಿಸಲು ಪ್ರಯತ್ನ ಮಾಡುವರು. ಆದುದರಿಂದ ಅವರು ಸಾಗುವಳಿ ಮಾಡಲು ಜಮೀನು ಯೋಗ್ಯವಾಗಿದೆ ಎಂಬುದನ್ನು ದೃಢ ಪಡಿಸಲು ಎಲ್ಲಾ ಈಚಲು ಮರಗಳನ್ನು ತೆಗೆದು ಹಾಕುವರು.

## ಕೊಡಗಿನ ಮುಖ್ಯಾಂತರ ಕೇರಳಕ್ಕೆ ಆಹಾರ ಸಾಮಗ್ರಿಗಳ ಕಳ್ಳಸಾಗಾಣಿಕೆ

೩೫೮ (೪೨೨) ಶ್ರೀಮತಿ ಸುಮ ವಸಂತ, (ವೀರಾಜಪೇಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ರಾಜ್ಯದಿಂದ ಕೊಡಗಿನ ಮುಖ್ಯಾಂತರ ದವಸ ಧಾನ್ಯಗಳು ಕೇರಳಕ್ಕೆ ಕಳ್ಳಸಾಗಾಣಿಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಲ್ಲಿ ಪೋಲೀಸ್‌ನವರಿಂದ ಮತ್ತು ಆಹಾರ ತನಿಖಾ ದಳದವರಿಂದ ಪತ್ತೆಯಾದ ಪ್ರಕರಣಗಳೆಷ್ಟು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) —ಹೌದು.—

ಆ) ಪೋಲೀಸು ಇಲಾಖೆಯು ಆಹಾರ ತನಿಖಾ ದಳದ ಅಧಿಕಾರಿಗಳು ಎಂಟು ಪ್ರಕರಣಗಳನ್ನು ಪತ್ತೆ ಮಾಡಿ ತನಿಖೆ ನಡೆಸುತ್ತಿದ್ದಾರೆ.

## ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳು

೩೬೦ (೪೯೭) ಶ್ರೀಮತಿ ಸುಮಾವಸಂತ (ವೀರಾಜಪೇಟೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು).